## ಕ್ಯಾನ್ಸರ್ ಲಕ್ಷಣ

ಕ್ಯಾನ್ಸರ್ ಲಕ್ಷಣವನ್ನು ಯಾವುದೇ ಕಾರಣಕ್ಕೂ ಉಪೇಕ್ಷಿಸಬೇಡಿ ಎಂಬ ಎಚ್ಚರಿಕೆಯ ಮಾತನ್ನು ಲಂಡನ್ನಿನ ಸಂಶೋಧಕರು ನೀಡಿದ್ದಾರೆ. ಅರ್ಧಕ್ಕಿಂತ ಹೆಚ್ಚು ಕ್ಯಾನ್ಸರ್ ರೋಗಿಗಳು ಅದರ ಆರಂಭಿಕ ಲಕ್ಷಣವನ್ನು ಗುರುತಿಸುವಲ್ಲಿ ವಿಫಲರಾಗುತ್ತಿದ್ದಾರೆ ಎಂದೂ ಅವರು ಹೇಳಿದ್ದಾರೆ.

ಸುಮಾರು ಮಂದಿ ಕ್ಯಾನ್ಸರ್ ಕಾಣಿಸಿಕೊಂಡ ಸಂದರ್ಭದಲ್ಲಿ ವಯೋಸಹಜ ಸಾಮಾನ್ಯ ಬೇನೆ ಎಂದುಕೊಳ್ಳುತ್ತಾರೆ. ಕೆಲವರು ಏನೋ ನಂಜಾಗಿದೆ ಎಂದುಕೊಂಡರೆ ಇನ್ನೂ ಕೆಲವರು ಸಂಧಿವಾತ, ಗುದದಲ್ಲಿ ಆಗಿದ್ದರೆ ಪೈಲ್ಸ್ ಎಂದು ಭ್ರಮಿಸುತ್ತಾರೆ. ಅದೂ ಏನೇ ಆಗಿದ್ದರೂ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ ಎನ್ನುವುದು ವೈದ್ಯರ ವಾದ.

## ಅಸಂತೋಷವೂ ಖಿನ್ನತೆ

ಹತ್ತು ದಿನ ಕಳೆದರೂ ಯಾರು ಅಸಂತೋಷದಿಂದ ಹೊರಬರಲು ಸಾಧ್ಯವಿಲ್ಲವೋ ಅವರು ಖಿನ್ನತೆಗೆ ತುತ್ತಾಗಿರುತ್ತಾರೆ ಎನ್ನಬಹುದು ಎಂದು ವಾಷಿಂಗ್ಟನ್‌ನ ಸಂಶೋಧಕರ ಹೊಸ ಅಧ್ಯಯನ ಅಭಿಪ್ರಾಯಪಟ್ಟಿದೆ.

ಸಂಶೋಧಕರು ಹಳ್ಳಿಯ ನಿವಾಸಿಗಳಿಗಿಂತ ಪಟ್ಟಣವಾಸಿಗಳು ಹೆಚ್ಚು ಸಂತೋಷವಾಗಿರುತ್ತಾರೆ ಎಂಬ ಅಂಶವನ್ನೂ ತಮ್ಮ ಅಧ್ಯಯನದಲ್ಲಿ ಗುರುತಿಸಿದ್ದಾರೆ. ಇದು ಕೇವಲ ಯಾವುದೇ ಒಂದು ಪ್ರದೇಶಕ್ಕೆ ಮಾತ್ರ ಅನ್ವಯವಾಗುವ ಮಾತಲ್ಲ ಎಲ್ಲಾ ದೇಶ– ಪ್ರದೇಶಗಳಿಗೂ ಅನ್ವಯಿಸುತ್ತದೆ ಎಂದು ಅವರು ಒತ್ತುಕೊಟ್ಟು ಹೇಳಿದ್ದಾರೆ. .

## ಹ್ಯಾಂಡ್‌ವಾಷ್: ಇರಲಿ ಎಚ್ಚರ

ಕೈ ತೊಳೆದರೆ ಬರೀ ನೀರಿನಿಂದ ಶುದ್ಧವಾಗುವುದಿಲ್ಲ. ಅದಕ್ಕಾಗಿ ತರಹೇವಾರಿ 'ಹ್ಯಾಂಡ್‌ವಾಷ್' ಕ್ರೀಂ, ಸೋಪು, ದ್ರಾವಣಗಳ ಕಂಪೆನಿಗಳು ಜಾಹೀರಾತು ನೀಡಿ ಗ್ರಾಹಕರನ್ನು ಸಂಪಾದಿಸುತ್ತವೆ. ಕಣ್ಣಿಗೆ ಕಾಣದ ಸೂಕ್ಷ್ಮಾಣುಗಳನ್ನು ರಾಸಾಯನಿಕದಿಂದ ತಯಾರಿಸಿದ 'ಹ್ಯಾಂಡ್‌ವಾಷ್' ಕೊಲ್ಲುತ್ತದೆ ಎಂದು ಹೇಳಿ ಉತ್ತೇಜಿಸಲಾಗುತ್ತಿದೆ. ಆದರೆ, ಹೀಗೆ ಆರೋಗ್ಯ ರಕ್ಷಕ ಎಂದು ಬಳಸುವ ಇಂತಹ ವಸ್ತುಗಳ ದೀರ್ಘ ಬಳಕೆ ಆರೋಗ್ಯವನ್ನು ಹದಗೆಡಿಸುತ್ತದೆ ಎಂದು ಹೇಳುತ್ತದೆ ಕ್ಯಾಲಿಫೋರ್ನಿಯಾದ ವೈದ್ಯಕೀಯ ಸಂಶೋಧನಾ ಸಂಸ್ಥೆ.

ಸೂಕ್ಷ್ಮ ರೋಗಾಣುಗಳ ಹಂತಕ ರಾಸಾಯನಿಕಗಳು ಕ್ಯಾನ್ಸರ್ ಹಾಗೂ ಲಿವರ್‌ಗೆ ಹಾನಿಯನ್ನು ಉಂಟುಮಾಡುವ ಸಾಧ್ಯತೆ ಇದೆ ಎಂಬ ಭಯಾನಕ ಸಂಗತಿಯನ್ನು ಸಂಶೋಧಕರು ಹೊರಗೆಡವಿದ್ದಾರೆ.

ಇಲಿಗಳಿಗೆ ಇಂತಹ ರಾಸಾಯನಿಕಗಳನ್ನು ಆರು ತಿಂಗಳ ಕಾಲ ನಿರಂತರವಾಗಿ ನೀಡಿ ಅವುಗಳಿಗೆ ಕ್ಯಾನ್ಸರ್ ಲಕ್ಷಣಗಳು ಗೋಚರಿಸಿದ್ದನ್ನು ಅವರು ಪತ್ತೆ ಹಚ್ಚಿದ್ದಾರೆ. ಇದೇ ಸಮಯದಲ್ಲಿ ರಾಸಾಯನಿಕ ಮುಕ್ತ ಇಲಿಗಳು ಆರೋಗ್ಯದಿಂದ ಇರುವುದು ಅವರ ಅನುಮಾನವನ್ನು ಮತ್ತಷ್ಟು ಗಟ್ಟಿಗೊಳಿಸಿದೆ ಎಂದೂ ಹೇಳಿದ್ದಾರೆ.

## ಇ–ಮೇಲ್‌ನಿಂದ ಒತ್ತಡ

ಕಂಪ್ಯೂಟರ್ ಮೂಲಕ ನಡೆಯುವ ಪತ್ರವ್ಯವಹಾರಗಳ ಪರಿಶೀಲನೆ ಕೂಡ ಮನುಷ್ಯನಿಗೆ ಮಾನಸಿಕ ಒತ್ತಡವನ್ನು ಹೇರುತ್ತದೆ ಎಂಬ ಅಚ್ಚರಿಯ ಸಂಗತಿಯನ್ನು ಟೊರೊಂಟೊ ವಿವಿಯ ಸಂಶೋಧಕರ ಅಧ್ಯಯನ ಹೇಳಿದೆ.

ಅಂಚೆಯ ವಿಷಯ ಏನೇ ಇರಲಿ ಅವುಗಳನ್ನು ಪರಿಶೀಲಿಸಿದ ನಂತರ ವ್ಯಕ್ತಿಯ ಮನಸ್ಥಿತಿ ಮೊದಲಿನಂತೆ ಇರುವುದಿಲ್ಲ. ಆತನಲ್ಲಿ ಗಲಿಬಿಲಿ ಉಂಟಾಗಿರುತ್ತದೆ. ಇದಕ್ಕಾಗಿ ತಜ್ಞರು ವಿದ್ಯಾರ್ಥಿಗಳು ಸೇರಿದಂತೆ 124 ಮಂದಿಯನ್ನು ಅಧ್ಯಯನಕ್ಕೆ ಒಳಪಡಿಸಿದ್ದರು.

■ ಟಿಪ್ಸ್

